**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚಳ್ಳಕೆರೆ.**

**ಸಿ.ಸಿ. ನಂ. 106/2021**

ಪ್ರಮಾಣ ವಚನ ಬೋಧಿಸಲಾಯಿತು.

| | | | |
|---|---|---|---|
| ಹೆಸರು | : | ಯಶೋಧರ | ಸಿ.ಡಬ್ಲ್ಯೂ-3 |
| ತಂದೆ ಹೆಸರು | : | ಮಂಗ್ಯಣ್ಣ | ಪಿ.ಡಬ್ಲ್ಯೂ-3 |
| ವಯಸ್ಸು | : | 45 ವರ್ಷ | |
| ಉದ್ಯೋಗ | : | ವ್ಯವಸಾಯ | |
| ವಾಸಸ್ಥಳ | : | ಚಿಕ್ಕೇನಹಳ್ಳಿ | ದಿಃ 02-04-2026. |

**ಮುಖ್ಯ ವಿಚಾರಣೆ: ಮಾನ್ಯ ಎ.ಪಿ.ಪಿ. ರವರಿಂದಃ**

ಸಾಕ್ಷಿಗೆ ನಿಪಿ.2 ಮತ್ತು 3 ಅನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಯುಗಳನ್ನು ಕ್ರಮವಾಗಿ ನಿಪಿಃ 2(ಬಿ) ಮತ್ತು 3(ಬ್ ಅಂತ ಗುರುತಿಸಲಾಯಿತು. ಈಗ್ಗೆ 3 ವರ್ಷಗಳ ಹಿಂದೆ ಯಲಗಟ್ಟ ಗೊಲ್ಲರಹಟ್ಟಿಯಲ ಕಪಿಲೆ ಹತ್ತಿರ ಅಪಘಾತದ ವಿಚಾರವಾಗಿ ಮದ್ಯಾಹ್ನ 03-00 ರಿಂದ 03-30 ಗಂಟೆಯವರೆಗೆ ನನ್ನ ಹಾಗೂ ಚಾಸಾ-2 ರವರ ಸಮಕ್ಷಮ ಮಹಜರ್ ಕ್ರಮ ಜರುಗಿಸಿ ನಿಪಿ.2 ಕ್ಕೆ ಸಹಿ ಪಡೆದಿರುತ್ತಾರೆ.

ನಿಪಿ.3 ಕ್ಕೆ ಚಳ್ಳಕೆರೆ ಪೊಲೀಸ್ ಠಾಣೆಯಲ್ಲಿ 3 ವರ್ಷಳ ಹಿಂದೆ ಸಹಿ ಮಾಡಿರುತ್ತೇನೆ. ಅಪಘಾತದ ಸಂಬಂಧಿಸಿದ ಬೈಕ್ ಠಾಣೆಯಲ್ಲಿ ಇರುತ್ತದೆ. ನಿಪಿ.3 ಕ್ಕೆ ಮದ್ಯಾಹ್ನ 01-00 ರಿಂದ 02-00 ಗಂಟೆ ಸಮಯದಲ್ಲಿ ಸಹಿ ಮಾಡಿರುತ್ತೇನೆ. ಆ ಸಮಯದಲ್ಲಿ ನಾನು ಒಬ್ಬನೇ ಹಾಜರಿದ್ದೆ. ಬೇರೆ ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು, ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗಾಗಿ ಅನುಮತಿ ಕೋರಿರುತ್ತಾರೆ, ಸಾಕ್ಷಿಯ ಹೇಳಿಕೆ ಹಾಗೂ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಮಾನ್ಯ ಎ.ಪಿ.ಪಿ. ರವರಿಂದಃ**

ದಿನಾಂಕ 21.07.2020 ರಂದು ಯಲಗಟ್ಟ ಗೊಲ್ಲರಹಟ್ಟಿ ಸಮೀಪ ಗೌಡಪ್ಪ ಬಿನ್ ಸಿರಿಯಪ್ಪ ರವರ ಕಪಿಲೆ ಹತ್ತಿರ ಅಪಘಾತ ಸ್ಥಳದಲ್ಲಿ ಪೊಲೀಸರು ಮಹಜರ್ ಕ್ರಮ ಜರುಗಿಸಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ಚಾಸಾ-7 ರವರು ಹಾಜರಿದ್ದು ಅಪಘಾತ ಸ್ಥಳವನ್ನು ತೋರಿಸಿರುತ್ತಾರೆ ಎಂದರೆ ಸರಿ. ಸ್ಥಳ ಪಂಚನಾಮೆಯನ್ನು ಮದ್ಯಾಹ್ನ 02-00 ರಿಂದ 02-30

ರವರೆಗೆ ಜರುಗಿಸಲಾಗಿರುತ್ತದೆ ಎಂದರೆ ಸರಿ. ಅದೇ ದಿನ ನನ್ನನ್ನು, ಚಾಸಾ-2 ಮತ್ತು 7 ರವರು ಠಾಣೆಗೆ ಕರೆದುಕೊಂಡು ಹೋಗಿದ್ದರು ಎಂದರೆ ಸರಿ. ಠಾಣೆಯಲ್ಲಿ ನಿಲ್ಲಿಸಲಾಗಿದ್ದ ಕೆಎ-02 ಹೆಚ್ ಬಿ-113 ಮೋಟಾರ್ ಸೈಕಲ್ಲನ್ನು ಚಾಸಾ-7 ರವರು ನೋಡಿ ಗುರುತಿಸಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ಮದ್ಯಾಹ್ನ 03-15 ರಿಂದ 03-45 ರವರೆಗೆ ವಾಹನ ಪರಿಶೀಲನೆ ಪಂಚನಾಮೆ ಜರುಗಿಸಿ ಬೈಕನ್ನು ಜಪ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ನಿಪಿ.3 ಕ್ಕೆ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಶ್ರೀ ಟಿ.ಎಸ್.ಎಂ., ಆರೋಪಿ ಪರ ವಕೀಲರಿಂದಃ</u>**

ಚಾಸಾ-1 ನನ್ನ ಸಂಬಂಧಿ ಎಂದರೆ ನನ್ನ ಅಳಿಯ. ಅಪಘಾತವು ಯಾರ ತಪ್ಪಿನಿಂದ ಸಂಬವಿಸಿರುತ್ತದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಮಹಜರಿಗೆ ಹಾಜರಾಗಲು ಪೊಲೀಸರು ನೋಟೀಸ್ ನೀಡಿರುವುದಿಲ್ಲ. ಮಹಜರ್ ಕ್ರಮ ಜರುಗಿಸಿದ ದಿನಾಂಕ, ತಿಂಗಳು ಮತ್ತು ವರ್ಷ ಹೇಳಲು ಆಗುವುದಿಲ್ಲ. ಸ್ಥಳ ಪಂಚನಾಮೆ ಜರುಗಿಸಲು ಯಾರು ಸ್ಥಳ ತೋರಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಸ್ಥಳ ಪಂಚನಾಮೆಯನ್ನು ಯಾವ ಸ್ಥಳದಲ್ಲಿ ಪಂಚನಾಮೆ ಕ್ರಮ ಜರುಗಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯ ಕಪಿಲೆ ಹತ್ತಿರ ರಸ್ತೆಯಲ್ಲಿ ಮಹಜರ್ ಮಾಡಿರುತ್ತಾರೆ. ಆದರೆ ಸದರಿ ಕಪಿಲೆ ಯಾರಿಗೆ ಸೇರಿರುತ್ತದೆ ಎಂದು ಹೇಳಲು ಆಗುವುದಿಲ್ಲ. ಸ್ಥಳ ಪಂಚನಾಮೆಯ ಚಕ್ಕುಬಂದಿ ಹೇಳಲು ಆಗುವುದಿಲ್ಲ. ಮಹಜರ್ ಮಾಡಿದ ರಸ್ತೆಯ ಉದ್ದ ಮತ್ತು ಅಗಲ ಹೇಳಲು ಆಗುವುದಿಲ್ಲ. ಮಹಜರ್ ಮಾಡಿದ ಸಮಯದಲ್ಲಿ ಹೇಳಲು ನೆನಪಿಲ್ಲ. ನಿಪಿ.2 ಅನ್ನು ಯಾರು ಬರೆದಿರುತ್ತಾರೆ ಎಂದು ಹೇಳಲು ಆಗುವುದಿಲ್ಲ. ನಿಪಿ.2 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಪೊಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ.

ವಾಹನ ಪರಿಶೀಲನೆ ಪಂಚನಾಮೆ ಕ್ರಮ ಜರುಗಿಸಿದ ದಿನಾಂಕ, ತಿಂಗಳು ಮತ್ತು ವರ್ಷ ಹೇಳಲು ಆಗುವುದಿಲ್ಲ. ನಿಪಿ.3 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಪೊಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,

ನ್ಯಾಯಾಧೀಶರು, ಚಳ್ಳಕೆರೆ